**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

ಸಿ.ಸಿ, ನಂಬರ 6566/2024 ಸಿ.ಡಬ್ಲೂ.11 ಪಿ.ಡಬ್ಲೂ.8

| | |
|---|---|
| ಹೆಸರು | ಡಾ. ಗಿರೀಶ |
| ತಂದೆ/ಗಂಡ | ಕೆ. ಲಿಂಗಪ್ಪ |
| ವಯಸ್ಸು | 27 ವರ್ಷ |
| ಉದ್ಯೋಗ | ವೈದ್ಯಾಧಿಕಾರಿಗಳು ಟ್ರಾಮಾ ಕೇರ್ ಸೆಂಟರ್ ಜೀಮ್ಸ್ ಕಲಬುರಗಿ |
| ವಾಸಸ್ಥಳ | ಕಲಬುರಗಿ |

ದಿನಾಂಕ 06-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**(ಸಾಕ್ಷಿಯು ವಿಡಿಯೋ ಕಾನ್ಫರೇನ್ಸ ಮುಖಾಂತರ ಹಾಜರಾಗಿರುತ್ತಾರೆ )**

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ನಾನು ಜನವರಿ 2024 ರಿಂದ ಇಲ್ಲಿಯವರೆಗೆ ಟ್ರಾಮಾ ಕೇರ್ ಸೆಂಟರ್ ಜೀಮ್ಸ್ ಕಲಬುರಗಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಅಂತಾ ಕೆಲಸ ಮಾಡುತ್ತಿದ್ದೇನೆ.

ನಾನು ದಿಃ 04-09-2024 ರಂದು ಚಾಸ-1 ರವರು ರಾ. 09.52 ಗಂಟೆಗೆ ಅದೇ ದಿನ ಬೆಳಿಗ್ಗೆ 08.30 ಗಂಟೆಗೆ ಆದ ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ ಬಂದಿದ್ದರು. ಅವರ ಜೊತೆಗೆ ಚಾಸ-4ರವರು ಬಂದಿದ್ದರು. ಚಾಸ-1ರವರು ನಮಗೆ ಅವರ ತಲೆಗೆ ಮತ್ತು ಎದೆಗೆ ಪೆಟ್ಟು ಆಗಿರುತ್ತದೆ ಎಂದು ತಿಳಿಸಿದ್ದು ಅವರನ್ನು ಪರೀಕ್ಷಿಸಿ ನೋಡಿದಾಗ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ ಸದರಿಯವರಿಗೆ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಂಡು X-Ray ಮತ್ತು CityScan ಮಾಡಿ ನೋಡಿದಾಗ ಎಲ್ಲಾವು ಸರಿಯಾಗಿ ಇತ್ತು ನನ್ನ ಪ್ರಕಾರ ಸದರಿ ಗಾಯಗಳು ಸಾದ ಪ್ರಕಾರದ ಗಾಯಗಳು ಇರುತ್ತವೆ ಎಂದು ಅಭಿಪ್ರಾಯ ಪಟ್ಟು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ. 4 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 ಬಿ ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎಸ್ ಎಸ್ ಸಿ ವಕೀಲರಿಂದ:</u>

ನಾನು ಚಾಸ-1ರವರು ಹಲ್ಲೆ ಹಿನ್ನಲೆ ಮೇಲೆ ಆಸ್ಪತ್ರೆಗೆ ಬಂದಿರುತ್ತಾರೆ ಎಂದು ಪೋಲಿಸರಿಗೆ ತಿಳಿಸಿರುತ್ತೇನೆ. ನಿಪಿ-4ರಲ್ಲಿ ಗುರುತಿನ ಚಿಹ್ನೆಗಳನ್ನು ನಮೂದು ಮಾಡಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಎಡಗೈ ಹೆಬ್ಬಟ್ಟಿನ ಗುರುತನ್ನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ವೈದ್ಯಕೀಯ ನ್ಯಾಯಶಾಸ್ತ್ರದ ಪ್ರಕಾರ ಗಾಯಾಳುವಿನ ಎರಡು ಗುರುತಿನ ಚಿಹ್ನೆಗಳನ್ನು ನಮೂದು ಮಾಡಬೇಕಾಗುತ್ತದೆ ಎಂದರೆ ಸರಿ. ಗುರುತಿನ ಚಿಹ್ನೆಗಳು ಇಲ್ಲದೇ ಒಬ್ಬ ವ್ಯಕ್ತಿಯನ್ನು ಗುರುತು ಹಿಡಿಯಲು ಸಾಧ್ಯವಿಲ್ಲ

ಎಂದರೆ ಸರಿಯಲ್ಲ. ಎಡಗೈ ಹೆಬ್ಬೆಟ್ಟಿನ ಗುರುತು ಗುರುತಿನ ಚಿಹ್ನೆ ಅಲ್ಲ ಎಂದರೆ ಸರಿ. ಎಡಗೈ ಹೆಬ್ಬೆಟ್ಟಿನ ಗುರುತನ್ನು ಕ್ಯಾಸುವಲಿಟಿಯಲ್ಲಿ ತೆಗೆದುಕೊಂಡಿರುತ್ತಾರೆ. ನಿಪಿ-4ರ ಜೊತೆಗೆ ಎಡಗೈ ಹೆಬ್ಬೆಟ್ಟಿನ ಗುರುತನ್ನು ತೆಗೆದುಕೊಂಡ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-4ರಲ್ಲಿ X-Ray ಮತ್ತು CityScan ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು Investigation ಎಂದು ನಮೂದು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಸಮಯವನ್ನು ನಮೂದು ಮಾಡದೇ ಇದ್ದರೆ ಸದರಿ ಪ್ರಮಾಣ ಪತ್ರವು ಅಪೂರ್ಣಗೊಳ್ಳುತ್ತದೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಚಾಸ-1 ರವರಿಗೆ ಮೇಲ್ಭಾಗದಲ್ಲಿ ಕಾಣುವ ಯಾವುದೇ ಗಾಯಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಮೇಲ್ಭಾಗದಲ್ಲಿ ಕಾಣುವ ಯಾವುದೇ ಗಾಯಗಳು ಇಲ್ಲದಿದ್ದಾಗ ಅವು ಸದಾ ಗಾಯಗಳು ಅಂತಾ ಅಭಿಪ್ರಾಯ ಪಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಚಾಸ-1ರವರು ಅವರಿಗೆ ಪೆಟ್ಟಾಗಿರುತ್ತದೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಾನು ಚಾಸ-1 ರವರ ಹೇಳಿಕೆಯ ಮೇರೆಗೆ ಸದಾ ಗಾಯಗಳು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸ-1ರವರು ದಿಃ 04.09.2024 ರಂದು ದಾಖಲಾಗಿ ದಿಃ 05.09.2024 ರಂದು ಬಿಡುಗಡೆ ಆಗಿರುತ್ತಾರೆ. ಚಾಸ-1ರವರಿಗೆ ಮೇಲ್ಭಾಗದಲ್ಲಿ ಕಾಣುವ ಯಾವುದೇ ಗಾಯಗಳು ಆಗದ ಕಾರಣ ಅವರನ್ನು ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿಯು ಚಾಸ-1ರವರು ಅವರಿಗೆ ನೋವು ಇದೆ ಅಂತಾ ಹೇಳಿದ್ದು ಮತ್ತು ಎಮ್ ಎಲ್ ಸಿ ಪ್ರಕರಣಗಳಲ್ಲಿ ಗಾಯಾಳುವಿನ ಗಾಯದ ಬಗ್ಗೆ ತಿಳಿದುಕೊಳ್ಳಲು ಹೆಚ್ಚಿನ ಪರೀಕ್ಷೆಗಾಗಿ ಆಸ್ಪತ್ರೆಯಲ್ಲಿ ದಾಖಲು ಮಾಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ಚಾಸ-1ರವರನ್ನು ದಿಃ 05.09.2024 ರಂದು ಮಧ್ಯಾಹ್ನ 12.50 ಗಂಟೆಗೆ ಬಿಡುಗಡೆ ಮಾಡಿರುತ್ತೇವೆ. ಚಾಸ-1ರವರು ಅವರಿಗೆ ಕಿವಿಯ ತೊಂದರೆಯ ಬಗ್ಗೆ ಹೇಳಿರುವುದಿಲ್ಲ. ನಾನು ಚಾಸ-1ರವರಿಗೆ ಸಹಾಯ ಮಾಡಲು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ